ಬನ್ನಿ ಹಬ್ಬವೆಂದ ಕೂಡಲೆ ಬಾಲ್ಯದ ನೆನಪುಗಳು ಚಿತ್ರವತ್ತಾಗಿ ಮೂಡುತ್ತವೆ. ಬನ್ನಿ ಹಬ್ಬ ಬರುವ ಒಂದು ತಿಂಗಳ ಮುಂಚೆ ಹುಡುಗರೆಲ್ಲಾ ಸೇರಿ ಬಿಲ್ಲು–ಬಾಣ ಮಾಡಲು ಶುರುಮಾಡುತ್ತಿದ್ದೆವು. ಬಿದಿರು ಕೋಲು ತಂದು ಅದನ್ನು ಸೀಳಿ ಬಗ್ಗಿಸಿ ದಾರ ಕಟ್ಟುವುದೇ ಒಂದು ಸಾಹಸ. ಬಿದಿರು ಕೋಲು ಸಿಗದೆಹೋದಾಗ, ಲಂಟಾನ, ಬತ್ತಿ, ತಂಗಡಕಿ ಮೊದಲಾದ ಬಾಗಿದರೆ ಮುರಿಯದಂತಹ ಹಸಿ ಕೋಲುಗಳನ್ನು ಬಗ್ಗಿಸಿ ದಾರ ಕಟ್ಟಿ ಬಿಲ್ಲುಗಳನ್ನು ಮಾಡುತ್ತಿದ್ದೆವು. ಇದರಲ್ಲಿ ಚೆನ್ನಾಗಿ ಬಿಲ್ಲು ಕಟ್ಟುವ ಬಿಲ್ವಿದ್ಯೆಗಾರರೂ ಇರುತ್ತಿದ್ದರು. ಕೆಲವೊಮ್ಮೆ ಅಜ್ಜಂದಿರು, ಅಪ್ಪಂದಿರು ಈ ಬಿಲ್ಲುಗಳ ತಯಾರಿಯಲ್ಲಿ ಸಹಾಯ ಮಾಡುತ್ತಿದ್ದರು. ನಂತರ ನಮ್ಮೂರ ಅಂಗಡಿಗಳಿಗೆ ಬಣ್ಣದ ಹಾಳೆ ಮಿಂಚನ್ನು ಹಚ್ಚಿಕೊಂಡ ಬಿನ್ನಾಣಗಿತ್ತಿಯರಂತಹ ಬಿಲ್ಲು–ಬಾಣಗಳು ಮಾರಾಟಕ್ಕೆ ಬರುತ್ತಿದ್ದವು. ಆದರೆ ಅಪ್ಪ ಊರ ಅಂಗಡಿಗಳಲ್ಲಿ ದುಬಾರಿ ಎಂದು ಕೊಟ್ಟೂರ ಸಂತೆಯಲ್ಲಿ ಒಂದು ಜೊತೆ ಬಿಲ್ಲು–ಬಾಣವನ್ನು ತರುತ್ತಿದ್ದ. ಹಬ್ಬ ಮುಗಿವ ತನಕ ಬಿಲ್ಲನ್ನು ಮುರಿಯದಂತೆ ಕಟು ಎಚ್ಚರಿಕೆ ಕೊಡುತ್ತಿದ್ದ. ಇಬ್ಬರು ತಂಗಿಯರಿಗೆ ಬಿಲ್ಲು–ಬಾಣ ತರುತ್ತಿರಲಿಲ್ಲ. ಅವರು ಮುನಿಸಿಕೊಂಡು ನನ್ನ ಬಿಲ್ಲನ್ನು ಹಿಡಿದೇ ಖುಷಿಪಡುತ್ತಿದ್ದರು.

ಬಿಲ್ಲು–ಬಾಣ ಗಂಡಾಳ್ವಿಕೆಯ ಸಂಕೇತದಂತೆ ಕೇವಲ ಹುಡುಗರಿಗೆ ಮಾತ್ರ ಮನೆಗಳಲ್ಲಿ ಬಿಲ್ಲು ತರುತ್ತಿದ್ದರು. ಅಪ್ಪ ತತ್ರಾಣಿ ಕಡ್ಡಿ, ಜೋಳದ ದಂಟು, ಕವಸೆ ಹುಲ್ಲು, ಗುರಾಳು ಹೂ ಸೇರಿಸಿ ಹೆಣೆದು ಬಾಗಿಲುಗಳಿಗೆ ದಂಡೆ ಮಾಡುತ್ತಿದ್ದರು. ದಸರಾ ಸಂಜೆ ಅಪ್ಪ ತಂದ ಬಿಲ್ಲು–ಬಾಣಗಳನ್ನು ಮನೆಯ ದೇವರ ಜಗುಲಿಯಲ್ಲಿಟ್ಟು ಪೂಜೆ ಮಾಡಲಾಗುತ್ತಿತ್ತು. ಹೀಗೆ ಪೂಜೆಗೊಳಗಾದ ಬಿಲ್ಲು–ಬಾಣಗಳನ್ನು ಊರಿನ ಬರಮಪ್ಪನ ಗುಡಿಯ ಬುಡದಲ್ಲಿ ವಾಲಿ ನಿಂತಿದ್ದ ಬನ್ನಿ ಮರಕ್ಕೆ ಊರಿನ ಹುಡುಗರೆಲ್ಲಾ ಯುದ್ಧಕ್ಕೆ ಹೊರಟ ಯೋಧರಂತೆ ಹೋಗಿ ಬಾಣಗಳನ್ನು ಹೊಡೆಯುತ್ತಿದ್ದೆವು. ಕೊನೆಗೆ ಮರದ ಮೇಲೆ ಬಿಲ್ಲುಗಳನ್ನು ಎಸೆದು ಕೈಗೆ ಸಿಕ್ಕಷ್ಟು ಬನ್ನಿ ಎಲೆಗಳನ್ನು ಕಿತ್ತುಕೊಂಡು ಬಂದು ಮನೆಗೆ ತರುತ್ತಿದ್ದೆವು. ಮೊದಲಿಗೆ ಅಪ್ಪ ಅವ್ವಗೆ ಬನ್ನಿ ಕೊಟ್ಟು ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಿದ್ದೆವು. ನಂತರ ಇಡೀ ಊರಿಗೆ ಪಯಣ ಶುರುವಾಗುತ್ತಿತ್ತು. ಎಲ್ಲರ ಮನೆಗಳಿಗೆ ಹೋಗಿ 'ಬನ್ನಿ ಕೊಟ್ಟು, ಬನ್ನಿ ತಗೊಂಡು ಬಂಗಾರದಂಗೆ ಇರೋಣ' ಎಂದು ಬರುತ್ತಿದ್ದೆವು. ಹಿರಿಯರಾಗಿದ್ದರೆ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುವುದೇ ಒಂದು ಹಬ್ಬ. ಇದು ಕೂಡ್ಲಿಗಿ ತಾಲ್ಲೂಕಿನ ಹಾರಕನಾಳಿನ ನೆನಪು. ದೊಡ್ಡವರಾದಂತೆ ಕೊಟ್ಟೂರಿನ ಕೊಟ್ಟೂರೇಶ್ವರ ದಸರಾ ನೋಡಲು ಹೋಗುತ್ತಿದ್ದೆವು. ಹೀಗೆ ಬಾಲ್ಯದಲ್ಲಿ ದಸರಾ ಗರಿಗಟ್ಟುತ್ತಿತ್ತು. ಬಹುಶಃ ಎಲ್ಲರ ಬಾಲ್ಯದ ನೆನಪುಗಳಲ್ಲಿಯೂ ಹೀಗೆಯೆ ಒಂದು 'ಬಾಲ್ಯದ ದಸರಾ' ಅಚ್ಚೊತ್ತಿರುತ್ತದೆ.

'ಮೈಸೂರು ದಸರಾ ಎಷ್ಟೊಂದು ಸುಂದರ' ಎನ್ನುವ ಹಾಡೊಂದು ರೇಡಿಯೊದಲ್ಲಿ ಬಿತ್ತರವಾದಾಗಲೆಲ್ಲಾ ಹೇಗಿರಬಹುದು ಮೈಸೂರು ದಸರಾ ಎನ್ನುವ ಬೆರಗು ಮೂಡುತ್ತಿತ್ತು. ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಎ. ಕಲಿಯಲು ಬಂದಾಗ ಬೆಳಗಿನ ವಾಕ್ ಹೋಗುತ್ತಿದ್ದುದೇ ಮಹಾನವಮಿ ದಿಬ್ಬದ ಆವರಣಕ್ಕೆ. ಆಗೆಲ್ಲಾ ವಿಜಯದಶಮಿ ನಡೆಯುವಾಗ ರಾಜ–ರಾಣಿ ಹೇಗೆ ಕೂರುತ್ತಿರಬಹುದು, ಜನರು ಹೇಗೆಲ್ಲಾ ಕೂತು ನಿಂತು ಆಟ ಆಡಿ ಸಂಭ್ರಮಿಸುತ್ತಿರಬಹುದು ಎನ್ನುವುದನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಸಂಶೋಧನಾ ವಿದ್ಯಾರ್ಥಿಯಾಗಿ ದಸರೆಯ ಬಗ್ಗೆ ಕೆಲವು ಸಂಗತಿಗಳನ್ನು ಗ್ರಂಥಾಲಯದ ಓದಿನಿಂದ ಕಲಿಯತೊಡಗಿದೆ.

ಪಿಎಚ್.ಡಿ. ನಂತರ ಕೆಲಸವೊಂದರಲ್ಲಿ ಮೈಸೂರಿನಲ್ಲೆ ಎರಡು ವರ್ಷ ನೆಲೆಸುವ ಸಂದರ್ಭ ಒದಗಿತು. ಆಗ ದಸಾರ ಸಂದರ್ಭಕ್ಕೆ ಇಡೀ ಮೈಸೂರು ಹೇಗೆ ಹರೆಯಕ್ಕೆ ಬಂದ ಯುವಕ ಯುವತಿಯರಂತೆ ಮೈದುಂಬಿಕೊಳ್ಳುತ್ತದೆ ಎನ್ನುವುದನ್ನು ಹತ್ತಿರದಿಂದ ನೋಡಿ ಕಣ್ತುಂಬಿಕೊಂಡಿದ್ದೆ. ಬಯಲು ಸೀಮೆಯ ನನಗೆ ವಿಪರೀತ ಕಣ್ಣುಕೋರೈಸುವ ವಿದ್ಯುತ್ ದೀಪಗಳ ಅಲಂಕಾರ ನಮ್ಮೂರ ಬೀದಿ ದೀಪಗಳಿಲ್ಲದ ಅಮಾವಾಸ್ಯೆಯ ಕತ್ತಲ ರಾತ್ರಿಗಳನ್ನು ನೆನಪಿಸುತ್ತಿತ್ತು. ಆಗಲೆ ಅಪ್ಪ ಅವ್ವರಿಗೆ ಮೈಸೂರು ದಸರಾ ತೋರಿಸಿ ಪುಳಕಗೊಂಡಿದ್ದೆ. ಈಗ ಕೂತು ದಸರಾ ಬಗ್ಗೆ ಬರೆಯುವಾಗ ಈ ಎಲ್ಲಾ ನೆನಪುಗಳು ಸರದಿಯಲ್ಲಿ ನಿಂತಿವೆ. ಚೂರು ಈ ನೆನಪುಗಳನ್ನು ಪಕ್ಕಕ್ಕಿಟ್ಟು ಈ ನಾಡಿನಲ್ಲಿ ದಸರಾ ಹಬ್ಬವನ್ನು ಜನರು ಹೇಗೆಲ್ಲಾ ಪರಿಭಾವಿಸಿದ್ದಾರೆ ಎನ್ನುವುದನ್ನು ನೋಡೋಣ. ಒಮ್ಮೆ ನಾಡನ್ನು ಸುತ್ತೋಣ.

## ನಿಸರ್ಗಾರಾಧನೆಯ ಪಳೆಯುಳಿಕೆ

ಕರ್ನಾಟಕದ ಸಂದರ್ಭದಲ್ಲಿ ವಿಜಯನಗರದ ಹಕ್ಕಬುಕ್ಕರ ಕಾಲದಲ್ಲಿಯೇ ದಸರಾ ಆರಂಭವಾಯಿತು ಎನ್ನುವ ದಾಖಲೆಗಳಿವೆ. ಮುಂದೆ ವಿಜಯನಗರದ ಅರಸರಿಂದ ಈ ಹಬ್ಬಕ್ಕೆ ರಾಜಮಾನ್ಯತೆ ಸಿಕ್ಕಂತೆ ಕಾಣುತ್ತದೆ. ಆದರೆ ಈ ನೆಲದಲ್ಲಿ ಇದಕ್ಕೂ ಮೊದಲು ಮಾತೃಸಂಸ್ಕೃತಿಯ ಕುರುಹಾಗಿ ಶಾಕ್ತ ಮತ್ತು ಕೌಳ ಪಂಥಗಳ ಆಚರಣೆಯಾಗಿತ್ತು ಎನ್ನುವುದನ್ನು ಗಮನಿಸಬೇಕು. ಈ ನೆಲೆಯಲ್ಲಿ ಹುಡುಕಾಟ ಮಾಡಿದರೆ ಆದಿಮ ಸಂಸ್ಕೃತಿಯ ಬೇರುಗಳು ಕಾಣಿಸುತ್ತವೆ. ಆದಿಮ ಜನರ ನಿಸರ್ಗಾರಾಧನೆಯ ಪಳೆಯುಳಿಕೆಯಂತೆ ದಸರಾ ಕಾಣುತ್ತದೆ. ಜನ ಸಮುದಾಯಗಳಲ್ಲಿ ನಿಸರ್ಗವನ್ನು ಆರಾಧಿಸುವ ಸುಳಿವುಗಳು ಈಗಲೂ ಈ ಹಬ್ಬದ ಆಚರಣೆಯಲ್ಲಿ ಉಳಿದುಕೊಂಡು ಬಂದಿವೆ. ಕಾರಣ ಬನ್ನಿಗಿಡಗಳು ನವರಾತ್ರಿಯಲ್ಲಿ ವಿಶೇಷವಾಗಿ ಪೂಜೆಗೊಳ್ಳುತ್ತವೆ.

ಶಕ್ತಿದೇವತೆಯನ್ನು ಮರದಮ್ಮನಾಗಿ ನೋಡುವ ಪರಂಪರೆ ಕರ್ನಾಟಕದಾದ್ಯಂತ ಇದೆ. ಬಹುಪಾಲು ಗ್ರಾಮದೇವತೆಗಳನ್ನು ಮರದಿಂದ ಮಾಡುತ್ತಾರೆ. ಹಲವು ಹೆಣ್ಣು ದೈವಗಳ ಹೆಸರಲ್ಲೆ ಮರಗಳಿವೆ. ಬನಶಂಕರಿ, ಮರಗಮ್ಮ, ಹೊಂಗೆಲಕ್ಷ್ಮಿ, ಬನ್ನಿಮಾಂಕಾಳಿ, ಕರಿಕಾನಮ್ಮ, ಗುತ್ತೆಮ್ಮ ಮೊದಲಾದ ಹೆಣ್ಣುದೈವಗಳ ಹೆಸರಲ್ಲೆ ಮರ ಅಥವಾ ಬನದ ಸೂಚನೆ ಇದೆ.



